ಯಾರು ಕರಿದೇನೆ ಬರೋ ಜಾಗ ಅಂದರೆ ಪಂಚಾಯಿತಿ ಕಟ್ಟೆ ಮತ್ತು ಸುಡುಗಾಡಿ ಅಂತ ಕಾಣುತ್ತೆ.

ಆಗಲೇ ತಾಡುಪಾಲು ಹಾಸಿಗೊಂಡು ಕಟ್ಟೆ ಕೆಳಗ ಕುಂತುಬಿಟ್ಟಾರ. ನಾನು, ನನ್ನೇಣ್ತಿ, ಅಪ್ಪ-ಅಮ್ಮ, ಅಣ್ಣ ಎಲ್ಲರೂ ಕುಳಿತ ಜನರ ಸುತ್ತ ನಿಂತೇ ಇದ್ದವು. ಅತ್ತಿಗೆ ಕೂಸು ಇದ್ದದಕ್ಕ ಮನೆಯಲ್ಲೇ ಬಿಟ್ಟು ಬಂದಿದ್ದೆವು. ಕಟ್ಟೆಯ ಕೆಳಗೆ ನಾದರ ಬಸಪ್ಪ, ಕಟಿಂಗ್ ಮಾಡುವ ಸಾಮಾನುಗಳು ಮತ್ತು ಸುಣ್ಣದಪುಟ್ಟಿಯಲ್ಲಿ ಕಸಬಾರಿಗೆ ನೆನೆಬಿಟ್ಟು, ಒಂದು ಬೀಡಿ ಹಚ್ಚಿಗೊಂಡು ಕುಳಿತಿದ್ದ. ಕಟ್ಟೆಯ ಮೇಲೆ ಹನುಮಂದೇವರ ಪೂಜಾರಿ ನಮ್ಮ ಲಗ್ನಪತ್ರವನ್ನು ಕೈಯಲ್ಲಿಡಿದು ಪಂಚರ ಕಿವಿಯಲ್ಲಿ ಏನೋನೊ ಗುಸುಗುಸು ಊದುತ್ತಿದ್ದ. ಗೌಡ, ಕುಲಕರ್ಣಿ ಸೇರಿದಂತೆ ಪಂಚರು ಮತ್ತು ಬೀಜದ ಮನುಷ್ಯ ನಾಗನಗೌಡ ಎಲ್ಲರೂ ಕಟ್ಟೆಯ ಮೇಲೆ ಕಂಬಳಿ ಹಾಸಿಕೊಂಡು ಕುಳಿತಿದ್ದರು. ಯಾರು ಮೊದಲು ಮಾತಾಡ್ತಾರೋ ಅಂತ ನನಗೆ ಕುತೂಹಲವಿತ್ತು.

ಹನುಮಂದೇವರ ಪೂಜಾರಿ 'ಚಿ: ಮಲ್ಲಿಕಾರ್ಜುನ ವಿವಾಹವಾಗಿ ಇಂದಿಗೆ ಎರಡುವರ್ಷ ತುಂಬಿದವು. ಅವರಿಗೆ ಮಕ್ಕಳಫಲ ಲಭಿಸದ ಕಾರಣ ಇವತ್ತು ಪಂಚಾಯಿತಿ ತೀರ್ಮಾನ ಏನು ನೀಡುತ್ತದೆ, ಎಂದು ಕಾದು ನೋಡಬೇಕು. ಊರಿನವರು ಸಹಕರಿಸಬೇಕು' ಅಂದು ಪೀಠಿಕೆ ಹಾಕಿದ. ಗೌಡ 'ಏನನ್ನ ಹೇಳದೈತೇನು?' ಅಂತ ನೇರ ನಮ್ಮ ಕುಟುಂಬವನ್ನು ನೋಡಿದ. 'ನೀವ ಯಂಗ ಹಂಗ ಗೌಡರ... ನಮ್ಮತಾಕ ಏನೂ ಉಳಕಂಡಿಲ್ಲ' ಅಂತ ಅಪ್ಪ ಬೇಸತ್ತು ಮಾತಾಡಿದ.

'ಇದಕ್ಕೆಲ್ಲಾ ಮರೇದಿ ಹೋತಿ ಬಂತು ಅಂತು ಪ್ರಸ್ನಾ ಇಲ್ಲಾ, ಎಲ್ಲಾ ಪ್ರಕೃತಿ ನೇಮದ' ಅಂತ ಜೊಲ್ಲು ಒರೆಸಿಕೊಳ್ಳುತ್ತಾ ಕುಲಕರ್ಣಿ ಹೇಳಿದ. ಉಳಿದ ಮೂರು ಪಂಚರೊಳಗ ಒಬ್ಬಾತ 'ಸುಮ್ಮನೆ ವತ್ತು ಮಾಡಬ್ಯಾಡ್ರಿ, ಸುಳಿ ಸುತ್ತ ಬೋಳಿಸಿಗೊಂಡು ಸುಣ್ಣ ಮೆತ್ತಿಗೊಂಡು, ಬೀಜದ ಮನುಷ್ಯಾನ ಮೂರು ವರ್ಷದ ಮಟ್ಟಿಗೆ ಉಡ್ಲಾಗ ಹಕ್ಕೆಂಬಿಡರಿ' ಅಂದಾಗ ಪಾರ್ವತಿ ಕಾಲಗಲ ಮಾಡಿನಿಂತಳು. 'ಹಲ್ಲು ಬಿಟಗೊಂಡು ಯಾಕ ನಿಂತೀಯ ಮಲ್ಲಗಾ, ನಿಂದೇನನ್ನ ತಕರಾರು ಇದ್ರ ದೈವದಾಗ ಹೇಳು' ಅಂದ ಗೌಡ. ನನ್ನ ಸಿಟ್ಟನ್ನ ಅದುಮಿಟ್ಟುಕೊಂಡೆ. ಬಗಲಾಗ ಪಾರ್ವತಿ ಎರಡು ಕೈಯಿನ ತಿಕ್ಕಿಕೋಂತ ನಿಂತಾಳ. ಆಕಿಗೆ ನನಗಿಂತ ದುಪ್ಪಟ್ಟು ಸಿಟ್ಟು ಅವರ ಮ್ಯಾಲೈತಿ.

'ಇದ್ರಾಗ ತಕರಾರು ಏನು ಬಂತ್ರಿ ಗೌಡ್ರೆ, ಊರಿನ ನಡೆ ಮೊದ್ಲಿಂದ ಬಂದೈತಿ, ಮತ್ತೇನು ಅದನ್ನ ಬದ್ಲಿ ಮಾಡಕಾತೈತೇನ್ರಿ' ಅಂತ ಮತ್ತೆ ಕುಲಕರ್ಣಿ ನಡುವೆ ಬಾಯಾಕಿದ. ನನಗೆ ಎಲ್ಲಿತ್ತೋ ಸಿಟ್ಟು ಒತ್ತರಿಸಿ ಬಂತು. 'ಊರ ಮಂದಿಗೆ ಮಕ್ಕಳನ ಮಾಡಸೋ ಜವಾಬ್ದಾರಿ ನಿಮ್ಮ ಹೆಗಲಿಗೆ ಯಾರು ವರಿಸ್ಯಾರ?' ಅಂದುಬಿಟ್ಟೆ.

'ಏನೇನೂ ಮಾತಾಡತದಲ್ಲಪ್ಪ ಈ ಹುಡುಗ, ಇನ್ನ ತಲಿಮ್ಯಾಲಿ ಮಾಸು ಒಣಗಿಲ್ಲ' ಅಂತ ಗೌಡ ವಟವಟ ಅಂದ. ಉಳಿದ ಪಂಚರು ಅರವತ್ತಾರು ನಂಬರ್ ಬರಿ ಅಂತ ಹನುಮಂದೇವರ ಪೂಜಾರಿಗೆ ಸೂಚನೆ ಕೊಟ್ಟರು. ಆ ಕಡೆ ಬೀಜದ ಮನುಷ್ಯ ನನ್ನ ಯಾವಾಗ ಉಡ್ಲಾಗಕ್ಕೆಂತರ ಅಂತ ಬಾಯಿತೆರಕೊಂಡು ಕುಂತಿದ್ದ. ಈ ಸಾರಿ ನನ್ನೇಣ್ತಿ ನೆಲಕ್ಕ ಕಾಲು ಹಚ್ಚ್ಯಾಳೋ ಇಲ್ಲ ಅನ್ನುವಂಗ ನಿಂತಿದ್ದಳು. ನಮ್ಮಣ್ಣ, ನಮ್ಮಪ್ಪ, ಅಮ್ಮ ಎಲ್ಲರೂ ಮೂಕರ ಹಾಗೆ ನಿಂತಿದ್ದರು. ಊರಾಗಿನ ಮಂದಿಯೆಲ್ಲ ತಮ್ಮತಮ್ಮಲ್ಲೇ ಸಣ್ಣದನಿ ಮಾಡಿಕೊಂಡು ಮಾತಾಡುತ್ತಾ ಕುಳಿತಿದ್ದರು. ಯಾವಾಗಲೂ ಯಾರದು ನ್ಯಾಯ ಇರುತ್ತೋ ಅವರು ನಿಂತುಗೊಂಡೇ ಇರಬೇಕು.

'ಬಸ್ಯಾ ಕತ್ತಿ ತೆಗಿ' ಅಂದ ಗೌಡ. ಪಾರ್ವತಿ ಮುಖ ರಂಗುರಂಗು ಮಾಡಿಕೊಂಡು, ನನ ಕಡೆ ನೋಡಿ ಕಣ್ಣು ಮೀಟಿ, ಸೀರೆ ಗೋಸಿ ಕಟ್ಟಿಕೊಂಡು, ಊರಿನ ಪಂಚರ ಕಡೆ ಕೈ ಮಾಡಿ, 'ಲೋ ಬಾಡಕೋಗಳೇ... ಇವತ್ತು ಹಡಕರ ಪಟ್ಟಿ ಮಾಡತೀರಿ, ನಾಳೆ ಮಿಂಡ್ರಿಗುಟ್ಟಿದೋರ ಪಟ್ಟಿ ಮಾಡತೀರಿ, ನಾವು ಹಂಗ ಸುಮ್ಮನಿರಮೇನು, ಯಾಕರಲೋ ನಿಮ್ಮ ಜಾತಿಯೊಳಗ ಒಬ್ಬರು ಹಡಕರಾಗಿಲ್ಲ. ಊರನೇನು ವತಗಂಡು ಕುಂತಿರೇನರಲೋ ನಾಡ ಬದ್ಮಾಶಗಳೇ' ಅಂದು, 'ನಡಿ ಮಲ್ಲಿ, ಓಡೇಹೋಗೋಣ' ಅಂದು ಅಲ್ಲಿಂದ ಓಡಿಸಿದಳು.

ದಿಕ್ಕು ತಪ್ಪಿ ಓಡಿದೆವು, ಯಾರದೋ ಪಂಚಾಯಿತಿ ಕಟ್ಟೆಯಿಂದ ಒಗಿರಲೇ ಕಲ್ಲು ಅನ್ನವು ದನಿ ಕೇಳಿ ಬಂತು. ಸದ್ಯಕ ಯಾವ ಕಲ್ಲು ನಮಿಗಿ ಬೀಳಲಿಲ್ಲ. ನಾವೇ ಮೊದಲ ಬಾರಿಗೆ ಊರಿನ ಇತಿಹಾಸದಲ್ಲಿ ಗಂಡ-ಹೆಂಡತಿ ಓಡಿಹೋಗಿದ್ದು. ಊರನ್ನು ಬಹಳ ಜಾಗೂರಕತೆಯಿಂದ ದಾಟಿದೆವು.

●